


# ರಾಯರ ಸಂಗೀತ ಪ್ರೀತಿ; ಕೇಳುಗರಿಗೆ ಅನುಭೂತಿ!

**ರಾಘವೇಂದ್ರ ರಾಯರೆಂದರೆ ಭಕ್ತಿ, ಅಲ್ಲಿರುವುದು ಸಂಗೀತ ಪ್ರೀತಿ, ಇದರಿಂದಾಗುವುದು ಕೇಳುಗರಿಗೆ ವಿಶಿಷ್ಟ ಅನುಭೂತಿ. ರಾಘವೇಂದ್ರರ ಮಹಿಮೆ ರಾಗಗಳಲ್ಲಿ ಅಡಗಿದೆ. ನಾದಮಾಧುರ್ಯದಲ್ಲಿ ಭಕ್ತಿಯ ಪರಾಕಾಷ್ಠೆ ತಲುಪಿಸುವ ಸಾಮರ್ಥ್ಯ ಇರುವುದು ರಾಯರ ಹಾಡುಗಳಲ್ಲೇ. ರಾಯರೇ ಬರೆದ 'ಇಂದು ಎನಗೆ ಗೋವಿಂದ' ಹಾಡು ಹಾಗೂ 'ಮರುತ ನಿನ್ನಯ ಮಹಿಮೆ' ಸುಳಾದಿ ಎಲ್ಲರಿಗೂ ಭಕ್ತಿಭಾವದ ಸಿಂಚನ ನೀಡುತ್ತದೆ.**

**■ ಉಮಾ ಅನಂತ್**

ಕೈಯಲ್ಲಿ ವೀಣೆ, ಹಣೆಯಲ್ಲಿ ತಿಲಕ, ಕಣ್ಣಲ್ಲಿ ಅಸಾಧಾರಣ ಕಾಂತಿ, ಈ ದೈವೀ ಸ್ವರೂಪಿಯ ಸಂಗೀತ ಪ್ರೀತಿ ಸಾಕಾರಗೊಂಡದ್ದು ಮಧುರಾತಿಮಧುರ ಅನುಭೂತಿ ಮೂಡಿಸುವ 'ಇಂದು ಎನಗೆ ಗೋವಿಂದ ನಿನ್ನಯ ಪಾದಾರವಿಂದ' ಹಾಡಿನ ಮೂಲಕ. 'ಎರಡು ಕನಸು' ಕನ್ನಡ ಸಿನಿಮಾದಲ್ಲಿ ಎಸ್. ಜಾನಕಿ ಅವರು ಹಾಡಿದ ಈ ಹಾಡು ಎವರ್‌ಗ್ರೀನ್ ಹಿಟ್ ಎನಿಸಿದೆ.

ಈಗಲೂ ಈ ಹಾಡಿನ ಧ್ವನಿಮುದ್ರಣ ಎಲ್ಲಾದರೂ ಕೇಳಿಸಿದರೆ ಕಿವಿ ನಿಮಿರುತ್ತದೆ, ಮನಸ್ಸು ಶಾಂತವಾಗುತ್ತದೆ, ಹೃದಯ ತಟ್ಟುತ್ತದೆ, ಮನಮುಟ್ಟುತ್ತದೆ. ರಾಘವೇಂದ್ರ ಸ್ವಾಮಿಗಳು ರಚಿಸಿದ, ಕರ್ನಾಟಕ ಶಾಸ್ತ್ರೀಯ ಸಂಗೀತದ ಮುಖಾರಿ ಹಾಗೂ ರಂಜಿನಿ ರಾಗಗಳಲ್ಲಿರುವ ಈ ಕೃತಿ, ಮಿಶ್ರಛಾಪು ತಾಳದಲ್ಲಿದ್ದು, ಅತ್ಯಂತ ಮನಮೋಹಕವಾಗಿ ಮೂಡಿಬಂದಿದೆ. ರಾಘವೇಂದ್ರ ಸ್ವಾಮಿಗಳು ಕನ್ನಡದಲ್ಲಿ ರಚಿಸಿದ ಎರಡೇ ಎರಡು ಕೃತಿಗಳಲ್ಲಿ ಇದೂ ಒಂದು. (ಇನ್ನೊಂದು ಸುಳಾದಿ– ಮರುತ ನಿನ್ನಯ ಮಹಿಮೆ).

ಮರುತ ನಿನ್ನಯ ಮಹಿಮೆ ಎನ್ನುವುದು ಆಂಜನೇಯನ ಅವತಾರದ ಕುರಿತಾದ ರಚನೆ. ಈ ಸುಳಾದಿ ಧ್ರುವತಾಳದಲ್ಲಿದೆ. ಈ ಸುಳಾದಿ 1955ರಲ್ಲಿ ಪರಿಮಳ ಎಂಬ ಪತ್ರಿಕೆ ಹಾಗೂ 1983ರಲ್ಲಿ ತಟವಾಡ ಮಂಜರಿ ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿದೆ ಎಂಬುದು ಸ್ಮರಣಾರ್ಹ. ಅಂದ ಹಾಗೆ, ಕರ್ನಾಟಕ ಸಂಗೀತದಲ್ಲಿ ಸುಳಾದಿ ಎಂದರೆ ಸುಲಭದ ಹಾದಿ ಎಂದರ್ಥ. ವಾಯುದೇವರ ಆಶೀರ್ವಾದ ಪಡೆಯಲು ಮತ್ತು ಶ್ರೀಹರಿಯನ್ನು ತಲುಪಲು